## ಕಳೆದ ಸಂಚಿಕೆಯಲ್ಲಿ



ಜೈಲಿನಿಂದ ಬಿಡುಗಡೆಯಾದ ಲೋಹಿಯಾ ವಿಶ್ರಾಂತಿಗಾಗಿ ಗೋವಾಕ್ಕೆ ಬಂದರು. ಸ್ವಾತಂತ್ರ್ಯದ ಚಳವಳಿಯ ಕಾವು ಗೋವಾದಲ್ಲೂ ಕಾಣಿಸಿಕೊಳ್ಳತೊಡಗಿ, ಅಲ್ಲಿನ ಪೋರ್ಚ್‌ಗೀಸ್ ಆಡಳಿತದ ವಿರುದ್ಧ ಪ್ರತಿಭಟನೆ ಆರಂಭವಾಗಿತ್ತು. ಚಳವಳಿಯಲ್ಲಿ ಭಾಗಿಯಾದ ಕಾರಣಕ್ಕಾಗಿ ಲೋಹಿಯಾ ಮತ್ತೆ ಬಂಧನಕ್ಕೊಳಗಾದರು. ಆ ಬಂಧನವನ್ನು ಗಾಂಧೀಜಿ ತೀವ್ರವಾಗಿ ಖಂಡಿಸಿದರು. ಹತ್ತು ದಿನಗಳ ನಂತರ ಲೋಹಿಯಾ ಬಿಡುಗಡೆಯಾಯಿತು. 1947ರ ಆಗಸ್ಟ್ 15ರಂದು ದೇಶ ಸ್ವಾತಂತ್ರಗೊಂಡಿತು. ಆ ಸಂಭ್ರಮದ ಬೆನ್ನಲ್ಲೇ ಕೋಮುಗಲಭೆ ಶುರುವಾಯಿತು. ಕಲ್ಕತ್ತಾದಲ್ಲಿ ಕೋಮುಸಂಘರ್ಷದ ವಾತಾವರಣದಲ್ಲಿ, ಮುಸ್ಲಿಂ ಗೆಳೆಯರೊಡನೆ ಮಾತನಾಡುವ ಕೆಲಸವನ್ನು ಲೋಹಿಯಾಗೆ ಗಾಂಧೀಜಿ ವಹಿಸಿದರು. ಕೋಮುಹಿಂಸೆಯನ್ನು ವಿರೋಧಿಸಿ ಗಾಂಧೀಜಿ ಉಪವಾಸ ಮಾಡತೊಡಗಿದಾಗ, ಹಿಂದೂ ಮುಸ್ಲಿಮರ ನಡುವೆ ಸಾಮರಸ್ಯ ಮೂಡಿಸುವ ಕೆಲಸದಲ್ಲಿ ಲೋಹಿಯಾ ತೊಡಗಿದ್ದರು. ಈ ನಡುವೆ, ಭಾರತ ಸರ್ಕಾರದ ಮಂತ್ರಿಗಳನ್ನು ಮುಗಿಸುವ ಷಡ್ಯಂತ್ರವನ್ನು ಲೋಹಿಯಾ ರೂಪಿಸಿದ್ದಾರೆ ಎನ್ನುವ ದೂರು ಗಾಂಧೀಜಿಯವರನ್ನು ತಲುಪಿತು.

ನನ್ನ ಸಿಟ್ಟನ್ನು ಶಮನಗೊಳಿಸಲು ಗಾಂಧೀಜಿ ಒಂದು ಹಾಸ್ಯ ಚಟಾಕಿ ಹಾರಿಸಿದರು:

‘ನಿಮ್ಮ ತಂದೆಯಂತೂ ನನ್ನ ಕಟ್ಟಾ ಭಕ್ತರಾಗಿದ್ದರು; ನೀವಿಷ್ಟು ಜಗಳಗಂಟರಾದದ್ದು ಹೇಗೆ?’

‘ಆದರೆ ಬಾಪೂ, ವಾರ್ತಾ ಮತ್ತು ಪ್ರಸಾರ ಇಲಾಖೆಯ ಮುಖಾಂತರ ಪ್ರಕಟಗೊಂಡ ವರದಿ ನಾವು ವಾರಗಟ್ಟಲೆ ಮಾಡಿದ ಕೆಲಸವನ್ನೆಲ್ಲ ಹಾಳು ಮಾಡಿಬಿಟ್ಟಿತು.’

‘ನೀವು ಈ ಇಲಾಖೆಯನ್ನು ನಡೆಸುವುದು ಸಾಧ್ಯವಿಲ್ಲವೇ? ನೀವಂತೂ ಜವಾಬ್ದಾರಿಯಿಂದ ಓಡಿ ಹೋಗುತ್ತೀರಿ.’

‘ಕಾಂಗ್ರೆಸ್‌ನಲ್ಲಿರುವವರು ಮಾತ್ರ ದೇಶದ ಸರ್ವಶ್ರೇಷ್ಠ ನಾಯಕರಲ್ಲ ಎಂಬ ತೀರ್ಮಾನಕ್ಕೆ ಬಂದಾಗ ನೀವು ನನಗೇನಾದರೂ ಜವಾಬ್ದಾರಿ ಹೊರಿಸಬಹುದು.’

‘ನೀವು ನೆಹರೂಗಿಂತ ಉತ್ತಮ ನಾಯಕರೆಂದು ಘೋಷಣೆ ಮಾಡಲೇನು?’

‘ಅಂಥ ಘೋಷಣೆ ಮಾಡಿದರೂ ಅಭ್ಯಂತರವೇನಿಲ್ಲ. ಹೀಗೆ ಘೋಷಣೆ ಮಾಡಿದರೆ ತಪ್ಪಾಗುತ್ತದೆ ಎನ್ನಿಸುವ ಕಾರಣಗಳೇನಾದರೂ ಇದ್ದರೆ ಹೇಳಿ.’

ಇದಾದ ಮೂವತ್ತಾರು ಗಂಟೆಗಳ ನಂತರ, ರಾತ್ರಿ ಗಾಂಧೀಜಿ ತಮ್ಮ ಮಲಗುವ ಕೋಣೆಗೆ ಲೋಹಿಯಾರನ್ನು ಕರೆದು ಕೇಳಿದರು:

‘ಅವರೆಲ್ಲಾ ಸರ್ವಶ್ರೇಷ್ಠರೆಂದು ನಾನೆಂದಾದರೂ ಹೇಳಿದ್ದೇನೆಯೇ?’

‘ಹೌದು. ನೀವು ಒಂದಲ್ಲ, ಸಾವಿರ ಸಲ ಹಾಗೆ ಹೇಳಿದ್ದೀರಿ.’

‘ನಾನು ಹೇಳಿದ್ದು ಅವರಿಗಿಂತ ಹೆಚ್ಚು ಒಳ್ಳೆಯವರು ಸದ್ಯಕ್ಕೆ ಇಲ್ಲ ಅಂತ. ಎರಡಕ್ಕೂ ವ್ಯತ್ಯಾಸವಿದೆ’ ಎಂದರು ಗಾಂಧೀಜಿ.

ಮುಚ್ಚುಮರೆಯಿಲ್ಲದೆ ಮಾತಾಡುತ್ತಿದ್ದ ಲೋಹಿಯಾ ಗಾಂಧೀಜಿಗೆ ಪ್ರಿಯರಾಗತೊಡಗಿದ್ದರು. 1948ರ ಜನವರಿಯ ಕೊನೆಯ ವಾರದಲ್ಲಿ ಗಾಂಧೀಜಿಯ ಜೊತೆಗಿನ ಮೂರು ಭೇಟಿಗಳನ್ನು ಲೋಹಿಯಾ ದಾಖಲಿಸುತ್ತಾರೆ:

‘1948ರ ಜನವರಿ 26ರಂದು ಗಾಂಧೀಜಿ ‘ನಿಮ್ಮೊಡನೆ ಅವಶ್ಯ ಮಾತಾಡುವುದಿದೆ, ನಾಳೆ ನಾಡಿದ್ದು ಮಾತಾಡುತ್ತೇನೆ’ ಎಂದರು.

ಜನವರಿ 28ರಂದು ಮತ್ತೆ ಅಂದರು: ‘ಸಮಯವೇ ಸಿಗುವುದಿಲ್ಲ. ನಿಮ್ಮೊಡನೆ ವಿಸ್ತಾರವಾಗಿ ಮಾತಾಡುವುದಿದೆ.’

ಜನವರಿ 29ರಂದು ಮತ್ತೆ ಹೇಳಿದರು: ‘ನಾಳೆ ನಿಮ್ಮೊಡನೆ ಅಗತ್ಯವಾಗಿ ಮಾತಾಡುತ್ತೇನೆ. ಕಾಂಗ್ರೆಸ್ ಹಾಗೂ ನಿಮ್ಮ ಪಕ್ಷದ ಸಂಬಂಧದ ಬಗ್ಗೆ ಏನಾದರೂ ತೀರ್ಮಾನ ಮಾಡಲೇಬೇಕು. ನಾಳೆ ಸಾಯಂಕಾಲ ತಪ್ಪದೆ ಬನ್ನಿ. ಮನಸ್ಸುಪೂರ್ತಿ ಮಾತಾಡೋಣ.’

‘ನಮ್ಮ ಪಕ್ಷಕ್ಕೂ, ಕಾಂಗ್ರೆಸ್‌ನ ಸದ್ಯದ ರೂಢಿಗೂ ತಾಳಮೇಳ ಹೊಂದಲಿಕ್ಕಿಲ್ಲವೆಂದೇ ಗಾಂಧೀಜಿ ತಿಳಿದಿದ್ದರು. ಈ ಹಿನ್ನೆಲೆಯಲ್ಲಿ ಒಂದು ತೀರ್ಮಾನಕ್ಕೆ ಬರಬೇಕೆಂಬ ಗಾಂಧೀಜಿಯವರ ಆಲೋಚನೆ ಸರಿಯಾದ ಗಳಿಗೆಯಲ್ಲೇ ಹುಟ್ಟಿತ್ತು ಹಾಗೂ ಅನುಕೂಲಕರವಾಗಿತ್ತು’ ಎಂದುಕೊಂಡ ಲೋಹಿಯಾ ನಾಳೆಗಾಗಿ ಕಾದರು. ಆದರೆ ಗಾಂಧೀಜಿ ಸಮಾಜವಾದಿ ಪಕ್ಷಕ್ಕೆ ತೋರಿಸಲಿದ್ದ ಮಾರ್ಗ ಏನೆಂಬುದು ಲೋಹಿಯಾಗೆ ತಿಳಿಯುವ ಗಳಿಗೆ ಬರಲೇ ಇಲ್ಲ:

‘ಜನವರಿ 30ರಂದು ನಾನು ಟ್ಯಾಕ್ಸಿಯಲ್ಲಿ ಕುಳಿತು ಗಾಂಧೀಜಿಯವರನ್ನು ಕಾಣಲು ‘ಬಿರ್ಲಾ ಭವನ’ದತ್ತ ಹೊರಟೆ. ಆದರೆ, ದಾರಿಯಲ್ಲಿಯೇ ಗಾಂಧೀಜಿಯವರ ಕಗ್ಗೊಲೆಯ ಸುದ್ದಿ ತಲುಪಿತು.

ಬಿರ್ಲಾಭವನ ತಲುಪಿದೆ; ಅಲ್ಲಿ ಆಗಲೇ ದೊಡ್ಡ ಜನಸಮೂಹ ಸೇರಿತ್ತು. ಅದರಲ್ಲಿ ಗಾಂಧೀಜಿ ಇರಲಿಲ್ಲ. ಕೋಣೆಯಲ್ಲಿ ಅವರ ಮೃತಶರೀರ ಮಾತ್ರ ಇತ್ತು.

ಆ ದಿನ ನಿಜವಾದ ಅರ್ಥದಲ್ಲಿ ನಾನು ಅನಾಥನಾದೆನೆಂದು ಮೊದಲ ಸಲ ನನಗೆ ಅನ್ನಿಸಿತು. ದೇಶದ ರಕ್ಷಕ ಕಣ್ಣೆದುರೇ ಸತ್ತು ಬಿದ್ದಿದ್ದ. ನಿನಗೆ ದೇವರಲ್ಲಿ ನಂಬಿಕೆ ಇದೆಯೋ ಇಲ್ಲವೋ ಎಂದು ಗಾಂಧೀಜಿ ಕೇಳಿದ್ದು ನೆನಪಾಯಿತು. ದೇವರಲ್ಲಿ ಅಚಲ ಶ್ರದ್ಧೆ ಹೊಂದಿ, ಜೀವನದುದ್ದಕ್ಕೂ ಅಹಿಂಸೆಯ ಆರಾಧಕರಾಗಿದ್ದವರೇ ಹಿಂಸೆಯ ಮೂಲಕ ಹತ್ಯೆಗೊಳಗಾದರೆಂದರೆ ಎಂಥ ವಿಪರ್ಯಾಸ!

ಗಾಂಧೀಜಿಯವರ ಮೃತಶರೀರವನ್ನು ನೋಡಿ ನಾನು ತತ್ತರಿಸಿಹೋದೆ:

‘ನೀವು ನಡುನೀರಿನಲ್ಲೇ ನಾಡಿನ ಜನತೆಯನ್ನು ಕೈಬಿಟ್ಟು ಹೋದದ್ದೇಕೆ? ಹೀಗೇಕೆ ಮೋಸ ಮಾಡಿದಿರಿ?’

ಆದರೆ ನನಗೆ ಉತ್ತರ ಕೊಡುವವರು ಯಾರು? ಗಾಂಧೀಜಿ ತೀರಿಕೊಂಡ ನಂತರದ ದೃಶ್ಯಗಳು ಲೋಹಿಯಾಗೆ ಇನ್ನೂ ಆಘಾತಕಾರಿಯಾಗಿ ಕಂಡವು:

‘ಮಹಾತ್ಮ ಗಾಂಧಿಯವರ ಶರೀರವನ್ನು ಫಿರಂಗಿ ಗಾಡಿಯ ಮೇಲೆ ಇಡಲಾಗಿತ್ತು... ತೀರಿಕೊಂಡ ಮನುಷ್ಯನ ಉತ್ತರಾಧಿಕಾರಿಗಳು ತಾವೇ ಎಂಬುದನ್ನು ಸಾವಿರಾರು ಜನಕ್ಕೆ ಹೇಳುವವರಂತೆ ಕೆಲವರು ಫಿರಂಗಿ ಗಾಡಿಯ ಮೇಲೆ ಕುಳಿತಿದ್ದರು... ಅಹಿಂಸೆಯ ಪ್ರವರ್ತಕನೊಬ್ಬ ಕೊಲೆಗಡುಕನ ಗುಂಡಿಗೆ ಬಲಿಯಾದಷ್ಟೇ ವಿಪರ್ಯಾಸಕರವಾದ, ವಿಕೃತವಾದ ಘಟನೆ ಇದು. ಯೇಸು ಕ್ರಿಸ್ತ ಪ್ರೀತಿ ಮತ್ತು ಅಹಿಂಸೆಯ ಶ್ರೇಷ್ಠ ಗುರು ಇರಬಹುದು. ಆದರೆ ನಲವತ್ತು ವರ್ಷಗಳಿಗೂ ಹೆಚ್ಚು ಕಾಲ ಪ್ರೀತಿ, ಅಹಿಂಸೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ಗಾಂಧಿ ಈ ಗುಣಗಳಿಗೆ ಸಂಕೇತವಾಗಿದ್ದರು. ಕ್ರಿಸ್ತನಿಗೆ ತನ್ನ ಜೀವಿತಕಾಲದಲ್ಲಿ ಇದು ಸಾಧ್ಯವಾಗಲಿಲ್ಲ. ಗಾಂಧಿಯ ಕಗ್ಗೊಲೆ ಪ್ರೇಕ್ಷಕರಿಗೆ ಘನತೆಯ ಪಾಠಗಳನ್ನು ಕಲಿಸುವ ದುರಂತ ನಾಟಕವಲ್ಲ. ಗಾಂಧಿ ಮತ್ತು ಅವರ ಅಂತ್ಯದ ಘನತೆಯನ್ನು ಇದು ಹೆಚ್ಚಿಸಿರಬಹುದು. ಆದರೆ ಭಾರತೀಯರ ಘನತೆಯನ್ನು ಅದು ಕುಗ್ಗಿಸಿದೆ; ಇನ್ನೂ ಕುಗ್ಗಿಸುತ್ತಲೂ ಇದೆ.’

ಗಾಂಧೀ ನಿರ್ಗಮನವಾದಾಗ ಜನಸಾಮಾನ್ಯರಲ್ಲಿ ಹುಟ್ಟಿದ ಅನಾಥಭಾವ ಲೋಹಿಯಾರ ಮನ ಕಲಕುತ್ತದೆ:

‘ನನಗೆ ನೆನಪಿರುವಂತೆ ನಾನು ನನ್ನ ಹದಿನಾರನೆಯ ವಯಸ್ಸಿನ ನಂತರ ಒಮ್ಮೆಯೂ ಅತ್ತಿದ್ದೇ ಇಲ್ಲ. ಆದರೆ, ಅವತ್ತು– ಅಂದರೆ ಗಾಂಧೀಜಿ ಸತ್ತ ದಿನವಲ್ಲ, ಅವರ ಚಿತಾಭಸ್ಮವನ್ನು ದೆಹಲಿಯಿಂದ ಅಲಹಾಬಾದಿಗೆ ಸಾಗಿಸುವ ದಿನ– ಮಾತ್ರ ನನಗೆ ನನ್ನ ಕಣ್ಣೀರನ್ನು ತಡೆಯಲಾಗಲೇ